# ಅಭ್ಯಾ ಸ ಪ್ರಶ್ನೆ ಪತ್ರಿಕೆ -೧

## ೧೦ ನೆಯ ತರಗತಿ ಪ್ರಥಮ ಭಾಷೆ ಕನ್ನಡ. ಗರಿಷ್ಠ ಅಂಕಗಳು : 100

**I . ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ . ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ .** 6X1=6

1.ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಾಕ್ಷರಗಳು

A . 25 B . 9 C . 34 D . 13

2. ಚೆಂದಳಿರು ಪದದಲ್ಲಿರುವ ಸಮಾಸವಿದು ——

A. ಕರ್ಮಧಾರಯ B. ಅಂಶಿ. C. ತತ್ಪುರುಷ D. ದ್ವಂದ್ವ.

3 ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುವುದು .

A. ಪ್ರಶ್ನಾರ್ಥಕ B. ಅರ್ಧವಿರಾಮ C. ಭಾವಸೂಚಕ D. ಆವರಣ

4.ವಿಶ್ವೇಶ್ವರಯ್ಯ ಅವರು ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದ್ದರು ಎನ್ನುವ ವಾಕ್ಯವು ವಾಕ್ಯದ ಈ ಮಾದರಿಗೆ ಉದಾಹರಣೆಯಾಗಿದೆ .

A. ಸಾಮಾನ್ಯ ವಾಕ್ಯ B. ಸಂಯೋಜಿತ ವಾಕ್ಯ C . ನಿಷೇಧಾರ್ಥಕ ವಾಕ್ಯ D. ಮಿಶ್ರ ವಾಕ್ಯ

5.ಕತ್ತಲೆಯೊಳ್ ಪದದಲ್ಲಿರುವ ವಿಭಕ್ತಿಯಿದು —

A . ಪ್ರಥಮಾ. B. ದ್ವಿತೀಯಾ. C. ಸಪ್ತಮಿ D. ತೃತೀಯಾ

6. ಪ್ರಥಮ ಪುರುಷ ಸರ್ವನಾಮಕ್ಕೆ ಉದಾಹರಣೆಯಾದ ಪದವಿದು

A. ನಾನು B. ಅವನು. C. ತಾನು D. ನೀನು

**II ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ .** 4X1=4

7.ಸ್ಥಾನ : ತಾಣ : : ಪಟ್ಟಣ : ———

8. ಇಸವಾಸ : ವಿಶ್ವಾಸ : : ಹೀಂಗ

9. ಹಳು : ಕಾಡು : : ಬನ್ನ : —-

10. ಧಗಧಗ : ಅನುಕರಣಾವ್ಯಯ : ಅಥವಾ : ———

**III . ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ .** 7X1=7

11.ಗಡಿ ಪ್ರದೇಶಗಳಲ್ಲಿ ಬ್ಲಾಕ್ ಔಟ್ ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ ?

12. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು ?

13. ಮನೆಮಂಚಮ್ಮ ಯಾರು ?

14. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು ?

15. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ?

16. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ ?

17.ವಿವೇಕಾನಂದರನ್ನು ಮಾನವತಾ ಮಿತ್ರ ಎಂದು ಕರೆದವರಾರು ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ .** 10X2=20

18. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ ?

19. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?

20. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ .

21. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು ?

22.ಹಲಗಲಿಗೆ ದಂಡು ಬರಲು ಕಾರಣವೇನು ?

23. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ ?

24. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು ?

25. ಪುಟ್ಟಿಯ ಪ್ರಶ್ನೆಗಳೇನು ?

26.ಭಗತ್ ಸಿಂಗ್ ನ ಉಪವಾಸದ ಕಾರಣ ಅವನ ಸಹೋದರಿಗೆ ತಿಳಿದುದು ಹೇಗೆ ?

27. ಒಗಟುಗಳ ಪ್ರಯೋಜನ ತಿಳಿಸಿ .

V . **ಕೆಳಗಿನ ಕವಿಗಳ /ಸಾಹಿತಿಗಳ ಜನ್ಮ ಸ್ಥಳ ,ಕಾಲ ,ಕೃತಿ ಮತ್ತು ಬಿರುದು /ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ** . 2X3=6

28.**ದುರ್ಗಸಿಂಹ**

29.**ಕುವೆಂಪು**

VI . **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ** . 1X3=3

30. **ಅತಿಶಯ ಪದಾರ್ಥ ನಿಕರ**
**ಪ್ರತೀತಿಯಂ ಪಡೆವ ಪಾದ ವಿನ್ಯಾಸಂ ಭೂ**

VII . **ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ,ಲಕ್ಷಣ ಬರೆದು ಸಮನ್ವಯಗೊಳಿಸಿ** . 1X3=3

31. **ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ**

VIII . **ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ** .

32.**ಮಾಡಿದ್ದುಣ್ಣೊ ಮಾರಾಯ**
**ಅಥವಾ**
**ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ.**

IX . **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ** . 6X3=18

33. "**ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ** ! "
34. " **ತಾಯಿ ,ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ** ? "
35. " **ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು** . "
36. "**ಹೊಸ ಭರವಸೆಗಳ ಕಟ್ಟೋಣ** "
37. " **ಬಲ್ಲರು ಯಾರಾ ಹಾಕಿದ ಹೊಂಚ**"
38. " **ಜೀವ ಸತ್ತು ಹೋಗುವುದು ಗೊತ್ತ** . "

X . **ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ** . 1X4=4

39 . **ಕೊರಳ ಸೆರೆ** ——————
——————
——————
——————
——————-
——————**ಮಾತೇನೆಂದು ಚಿಂತಿಸಿದ**

**ಅಥವಾ**

**ಮಾರಿಗೌತಣ**——————-
——————
——————-
——————-
——————
——————-**ರಾಜೀವಸಖನಾಣೆ**

XI. **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ,ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ** . 1X4=4

40 . **ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ**
**ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್**
**ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು**
**ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ**
**ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ**
**ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು**

XII . ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ . 2X4=8

41. ಕವಿ ಸಿದ್ಧಲಿಂಗಯ್ಯ ಹೇಳಿದ ಕತೆಯನ್ನು ಬರೆಯಿರಿ .

ಅಥವಾ

ಅಶೋಕ ಪೈಯವರು ಹೇಳಿದ ಸಂಶೋಧನಾ ಸತ್ಯವನ್ನು ಉದಾಹರಣೆ ಸಹಿತ ವಿವರಿಸಿ .

42. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ .

ಅಥವಾ

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ .

XIII . ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X4=4 (2+2)

ಮೇಲೆ ಆಕಾಶಕ್ಕೆ ಮುಖಮಾಡಿ ಬೆಳೆದ ಸದಾ ಹಸಿರಿನ ದಟ್ಟ ಕಾಡು ,ಸೂರ್ಯನ ಸೆಕೆ ತಾಗದ ಕಾಲಡಿಯಲ್ಲಿ ಕತ್ತಲು ಕವಿದಿರುವ ಗೊಂಡಾರಣ್ಯ . ಜೇನು ,ಜೀರುಂಡೆ ,ಕೀಟ ,ಪತಂಗಗಳಿಂದ ಹಿಡಿದು ಕಾಡೆಮ್ಮೆ ,ಮದ್ದಾನೆಗಳಿಂದಲೂ ಅಸಂಖ್ಯ ಜೀವಕೋಟಿಗಳ ಆಶ್ರಯತಾಣ ಪಶ್ಚಿಮ ಘಟ್ಟ . ಧುಮ್ಮುಕ್ಕುವ ಜಲಪಾತ ,ಬಿಸಿನೀರಿನ ಬುಗ್ಗೆ ,ಹಿಮಶೀತಲ ಸರೋವರ ,ಸೂಜಿಮೊನೆಯಂಥ ಶಿಖರ ,ದುರ್ಗಮ ಪ್ರಪಾತವೇ ಮುಂತಾದ ಉಬ್ಬು ತಗ್ಗಿನ ವೈಚಿತ್ರ್ಯಗಳ ಗುಡಾಣವಾಗಿದೆ . ಪಶ್ಚಿಮ ಘಟ್ಟಗಳ ನಿಜವಾದ ಪತನ ಪ್ರಾರಂಭವಾದದ್ದು ಸ್ವಾತಂತ್ರ್ಯ ಬಂದ ಮೇಲೆ . ಒಂದು ಕಡೆ ಏರುತ್ತಿರುವ ಜನಸಂಖ್ಯೆಯಿಂದ ಕೃಷಿ ಭೂಮಿಯ ವಿಸ್ತರಣೆಗೆಂದು ರೈತರು ಅರಣ್ಯ ಕಡಿದು ಅತಿಕ್ರಮ ಸಾಗುವಳಿ ಆರಂಭಿಸಿದ್ದು . ಇನ್ನೊಂದು ಕಡೆ ಅರಣ್ಯ ಹುಟ್ಟುವಳಿಗಳಾದ ಮೆಣಸು ,ದಾಲ್ಚಿನ್ನಿ ,ಜೇನು ,ಧೂಪ, ದಂತ,ರಾಳ, ಬಗಿನೆ ,ಬಿದಿರುಗಳಿಗೆ ಬೇಡಿಕೆ ಹೆಚ್ಚಾಗಿದ್ದರಿಂದ ಹಣದಾಸೆಗೆ ಕಾಡು ದೋಚುವವರ ಸಂಖ್ಯೆ ಹೆಚ್ಚಾದದ್ದು . ಇವೆಲ್ಲಕ್ಕಿಂತ ಹೆಚ್ಚಾಗಿ ದೇಶದ ಅಭಿವೃದ್ಧಿಗೆಂದು ಉದ್ದಿಮೆಗಳನ್ನು ಸ್ಥಾಪಿಸಿ ಖನಿಜ ,ವಿದ್ಯುತ್ತಿಗೆಂದು ಸರಕಾರವೇ ಪಶ್ಚಿಮ ಘಟ್ಟಕ್ಕೆ ಲಗ್ಗೆ ಹಾಕಿದ್ದು . ಕಾಪಾಡಬೇಕಿದ್ದ ಮಾಲೀಕನೇ ತನ್ನ ನೂರು ತೋಳುಗಳಿಂದ ಕಾಡಿ[1]ಗೆ ಕೊಡಲಿ ಬೀಸಿದ್ದು ,ತಾನು ದೋಚುವುದಷ್ಟೇ ಅಲ್ಲದೇ ,ದೋಚಲು ಸಿದ್ಧರಾದ ಖಾಸಗಿ ಉದ್ದಿಮೆದಾರರನ್ನಲ್ಲಿಗೆ ಕರೆದು ಕೊಡಲಿ ,ಗುದ್ದಲಿ ,ಸಿಡಿಮದ್ದು ನೀಡಿದ್ದು .

43. ಪ್ರಶ್ನೆಗಳು :

ಅ) ಪಶ್ಚಿಮ ಘಟ್ಟಗಳು ಹೇಗೆ ನಿರ್ನಾಮವಾಗುತ್ತಿವೆ ?

ಬ) ಪಶ್ಚಿಮ ಘಟ್ಟಗಳ ಸೌಂದರ್ಯವನ್ನು ಬಣ್ಣಿಸಿ .

XIV . ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ . 1X5=5

44. ನಿಮ್ಮನ್ನು ಮಂಗಳೂರಿನ ಸಂತ ಪಿಲೋಮಿನಾ ಪ್ರೌಢ ಶಾಲೆಯ ಸಂಧ್ಯಾ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಗುರುವಂದನಾ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ವಿಜಯವಾಣಿ ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ .

ಅಥವಾ

ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯ ಚಂದನ್ ಎಂದು ಭಾವಿಸಿಕೊಂಡು ಲಾಕ್ ಡೌನ್ ಅವಧಿಯಲ್ಲಿ ನೀವು ಮನೆಯಲ್ಲಿಯೇ ನಡೆಸಿದ ವಾರ್ಷಿಕ ಪರೀಕ್ಷಾ ಸಿದ್ಧತೆಯ ಕುರಿತು ಚಿತ್ರದುರ್ಗದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ನಿಮ್ಮ ಸ್ನೇಹಿತ ಸುಂದರ್ ನಿಗೆ ಪತ್ರವನ್ನು ಬರೆಯಿರಿ .

XV . ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ . 1X5=5

45. ಶಾಲಾಭಿವೃದ್ಧಿಯಲ್ಲಿ ಜನಪ್ರತಿನಿಧಿಗಳ ಪಾತ್ರ

ಅಥವಾ

ಗ್ರಂಥಾಲಯದ ಪ್ರಯೋಜನಗಳು

---

[1]

mamatabhagwat1@gmail.com ಕನ್ನಡತಿ ಮಮತಾ ಭಾಗ್ವತ್ ೮೭೬೨೧೭೦೩೪೪